# ಲಂಕೇಶರ ನೆಪದಲ್ಲಿ ಕನ್ನಡ ಕಥನ



**ಸುರೇಶ್ ನಾಗಲಮಡಿಕೆ**

ರೇಖಾಚಿತ್ರಗಳು: ಜಬೀವುಲ್ಲಾ ಎಂ. ಅಸದ್

ಲಂಕೇಶರ ಕಥನಗಳ ಕುರಿತು ಅಧ್ಯಯನ ನಡೆಸುತ್ತಿರುವ ಸುರೇಶ್ ನಾಗಲಮಡಿಕೆ, ತಮ್ಮ ಅಧ್ಯಯನಕ್ಕೆ ಪ್ರವೇಶಿಕೆ ರೂಪದಲ್ಲಿ ಬರೆದಿರುವ ಈ ಬರಹ – ಕನ್ನಡ ಕಥಾಲೋಕದ ಬೀಸೊಂದನ್ನು ಕಟ್ಟಿಕೊಡುತ್ತದೆ. ಕಥನದ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಈ ಟಿಪ್ಪಣಿಗಳು, ಕಥನ ಕಲೆಯ ಸೂಕ್ಷ್ಮವನ್ನು ಅರಿಯುವ ದೃಷ್ಟಿಯಿಂದಲೂ ಮುಖ್ಯವಾದವು.

ಲಂಕೇಶರ ಸಮಗ್ರ ಕಥನವನ್ನು ಮರು ಓದಿಗೆ ಒಳಪಡಿಸುವ ತುರ್ತು ಯಾಕಾಗಿ ಬೇಕಾಗಿದೆ? ಎಂಬ ಪ್ರಶ್ನೆಯನ್ನು ಕೇಳಿಕೊಂಡಾಗಲೂ ಹಲ ಬಗೆಯ ಆಲೋಚನೆಗಳು ಒತ್ತರಿಸಿ ಬರುತ್ತವೆ. ಇವರನ್ನು ಮತ್ತು ಇವರ ಕಥನವನ್ನು ನವ್ಯದ ಆರಂಭದ ವಿಮರ್ಶಕರು ಕೇವಲ ಅದೇ ಕಾಲಮಾನದ ಮಾನದಂಡಗಳನ್ನು ಮಾಪುಗೋಲನ್ನಾಗಿ ದುಡಿಸಿಕೊಂಡು ವಿಶ್ಲೇಷಣೆ ನಡೆಸಿದ್ದು ತಪ್ಪಲ್ಲ. ಅದು ಅಂದಿಗೆ ಸರಿಯಾಗಿತ್ತು. ನಂತರದಲ್ಲಿ ವಿಮರ್ಶೆಯ ದಿಗಂತಗಳು ಅನ್ಯ ಕಡೆಗೆ ಚಾಚಿಕೊಂಡಾಗ ಪ್ರತಿಯೊಬ್ಬ ಉತ್ತಮ ಬರಹಗಾರನ ಬರಹಗಳು ಸಮಕಾಲೀನವಾಗುತ್ತಾ ಹೋಗುತ್ತವೆ ಹಾಗೂ ಆ ಬರಹಗಳು ತನ್ನ ಅರ್ಥವಿನ್ಯಾಸಗಳನ್ನು ವಿಸ್ತರಿಸಿಕೊಳ್ಳುತ್ತವೆ. ಮುಂದೆಯೂ ಭಿನ್ನ ಸ್ವರೂಪವನ್ನು ಪಡೆದುಕೊಳ್ಳಬಹುದು. ಯಾವುದೇ ಬರಹಗಾರ ವಿಶಿಷ್ಟವಾಗುವುದೇ ತನ್ನ ಕೃತಿಗಳಲ್ಲಿ ಕಂಡ ಸಮಾಜ, ಬಳಸಿದ ಭಾಷೆ, ಮನುಷ್ಯನನ್ನು ಗ್ರಹಿಸಿದ ವಿಧಾನಗಳ ಬೆನ್ನಲ್ಲಿ. ಈ ಕಾಳಜಿಗಳ ದಾರಿಯಲ್ಲಿ ನಿರ್ದಿಷ್ಟವಾದೊಂದು ತಾತ್ವಿಕತೆಯನ್ನು ಯಾವೊಬ್ಬ ಬರಹಗಾರನು ಬಳಸಿಕೊಳ್ಳಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಲೇಖಕ ಅಲ್ಲಿಗೆ ನಿಲ್ಲುತ್ತಾನೆ. ತಾತ್ವಿಕತೆ ಎಂಬುದು ವ್ಯಕ್ತಿರೂಪಿತವಾಗಬೇಕಾಗಿಲ್ಲ. ಸಮಾಜದ ಗರ್ಭದಿಂದಲೇ ಜನ್ಮತಾಳಬಹುದು ಮತ್ತು ಸಮಾಜದ ಅಂಗವಾಗಿರುವ ಮನುಷ್ಯನ ಆಂತರ್ಯದ ತೀರ್ಮಾನಗಳಿಂದಲೂ ಒಂದು ತತ್ವ ಹೊರಬೀಳಬಹುದು. ಹಾಗಾಗಿ ಲಂಕೇಶ್‌ರಂಥ ಗಟ್ಟಿ ಬರಹಗಾರರಿಗೆ ತಾತ್ವಿಕತೆ ಎಂಬುದು 'ಬೆನ್ನು ಬೀಳುವ', 'ಕಾಡುವ' ವಿಚಾರವಾಗದೆ – ಮನುಷ್ಯ, ಸಮಾಜ